

# ಕಿಟ್ಟುವಿನ ದುರಾಸೆ

■ ನಾಗೇಂದ್ರ ಚಕ್ರಗಿರಿ
ಕಲೆ: ಸಂತೋಷ್ ಸಸಿಹಿತ್ಲು

ಸುಂದರವಾದ ಕಾಡೊಂದರಲ್ಲಿ ಕಿಟ್ಟು ಮತ್ತು ಪುಟ್ಟು ಎಂಬ ಕರಡಿಗಳಿದ್ದವು. ಎರಡೂ ಕರಡಿಗಳೂ ಒಳ್ಳೆಯ ಸ್ನೇಹಿತರಾಗಿದ್ದು ಯಾವಾಗಲೂ ಜೊತೆಯಾಗಿರುತ್ತಿದ್ದವು.

ಒಮ್ಮೆ ಕಿಟ್ಟುವಿಗೆ ಹಲಸಿನ ಹಣ್ಣು ತಿನ್ನಬೇಕೆಂಬ ಆಸೆಯಾಯಿತು. ಗೆಳೆಯ ಪುಟ್ಟುವಿಗೆ ತನ್ನ ಆಸೆಯನ್ನು ತಿಳಿಸಿತು. ಪುಟ್ಟುವಿಗಂತೂ ಹಲಸಿನ ಹಣ್ಣಿನ ಹೆಸರು ಕೇಳಿಯೇ ಬಾಯಲ್ಲಿ ನೀರೂರತೊಡಗಿತು. 'ಓಹೋ! ಒಳ್ಳೆಯ ಯೋಚನೆ. ನಾನೂ ಬಹಳ ದಿನದಿಂದ ಹಲಸಿನ ಹಣ್ಣು ತಿನ್ನಬೇಕು ಅಂತ ಬಯಸುತ್ತಿದ್ದೆ. ನಡಿ, ಹಲಸಿನ ಮರ ಹುಡುಕೋಣ' ಅಂತ ಪುಟ್ಟು ಹೊರಟೇ ಬಿಟ್ಟಿತು. ಇಬ್ಬರು ಗೆಳೆಯರೂ ಹಲಸಿನ ಹಣ್ಣಿನ ಬೇಟೆ ಆರಂಭಿಸಿಯೇ ಬಿಟ್ಟರು.

ಸ್ವಲ್ಪ ಹುಡುಕಾಟದ ನಂತರ ಹಲಸಿನ ಮರವೊಂದು ಅವರ ಕಣ್ಣಿಗೆ ಬಿತ್ತು. ಆ ಮರದಲ್ಲಿ ಭಾರಿ ಗಾತ್ರದ ಎರಡು ಹಣ್ಣುಗಳು ಮಾತ್ರ ಇದ್ದವು. ಕಿಟ್ಟು ಮತ್ತು ಪುಟ್ಟು ಇಬ್ಬರೂ ಒಂದೊಂದು ಹಣ್ಣು ಕಿತ್ತುಕೊಂಡರು. ಆಗ ಕಿಟ್ಟುವಿನ ಮನಸ್ಸಿನಲ್ಲಿ ಮತ್ತೊಂದು ಆಸೆ ಚಿಗುರೊಡೆಯಿತು. ಕಿಟ್ಟು ಪುಟ್ಟುವಿಗೆ ಹೇಳಿತು 'ಹಲಸಿನ ಹಣ್ಣೇನೋ ಸಿಕ್ಕಿತು. ಹಣ್ಣಿನ ಗಾತ್ರ ನೋಡಿದರೆ ತೊಳೆಗಳು ಭರ್ಜರಿಯಾಗೇ ಇದ್ದಂತಿವೆ. ರುಚಿಯೂ ಸೊಗಸಾಗಿರಬಹುದು. ಈ ಹಲಸಿನ ಹಣ್ಣಿನ ಜೊತೆಗೆ ಜೇನುತುಪ್ಪವಿದ್ದರೆ ಎಂತಹ ಮಜ ಅಲ್ಲವೇ'. ಆಗ ಪುಟ್ಟು 'ಅಣ್ಣಾ ಕಿಟ್ಟು, ಈಗ ಹಲಸಿನ ಹಣ್ಣು ಸಿಕ್ಕಿದೆ. ಅದನ್ನೇ ಹೊಟ್ಟೆ ತುಂಬ ತಿನ್ನೋಣ. ಇನ್ನು ಜೇನು ಹುಡುಕಿಕೊಂಡು ಹೋಗುವುದು ಬೇಡ. ಸಿಕ್ಕಷ್ಟಕ್ಕೆ ತೃಪ್ತಿ ಪಡೋಣ' ಎಂದಿತು. ಅದಕ್ಕೆ ಕಿಟ್ಟು 'ಪುಟ್ಟು ಜೇನಿದ್ದರೆ ಹಲಸಿನ ರುಚಿಯೇ ಬೇರೆ. ಹಲಸು ಸಿಕ್ಕಿದೆ. ಜೇನು ಸಿಗುವುದು ಅಷ್ಟೇನೂ ಕಷ್ಟವಾಗಲಾರದು. ಬಾ ಹುಡುಕೋಣ' ಎಂದಿತು. ಆದರೆ ಪುಟ್ಟು 'ಇಲ್ಲ ಕಿಟ್ಟಣ್ಣ, ನೀನು ಬೇಕಾದರೆ ಪ್ರಯತ್ನಿಸು. ನನಗೆ ಇಷ್ಟೇ ಸಾಕು' ಎಂದು ಹೇಳಿ ತನ್ನ ಹಲಸಿನ ಹಣ್ಣು ತೆಗೆದುಕೊಂಡು ಮನೆ ಕಡೆ ಹೊರಟಿತು.

ಕಿಟ್ಟು ತನ್ನ ಪಾಲಿನ ಹಣ್ಣನ್ನು ಮರದ ಕೆಳಗೇ ಇಟ್ಟು ಜೇನು ಹುಡುಕಿಕೊಂಡು ಹೊರಟಿತು. ಸ್ವಲ್ಪ ದೂರದಲ್ಲಿಯೇ ಮರವೊಂದರಲ್ಲಿ ಕಟ್ಟಿದ್ದ ಜೇನುಗೂಡು ಅದರ ಕಣ್ಣಿಗೆ ಬಿತ್ತು. ಕಿಟ್ಟುವಿಗೆ ಸಂತೋಷ ತಡೆಯಲಾಗಲಿಲ್ಲ. 'ಸೋಮಾರಿ ಪುಟ್ಟು. ಮನಸ್ಸು ಮಾಡಿ ನನ್ನ ಜೊತೆ ಬಂದಿದ್ರೆ ಅದಕ್ಕೂ ರುಚಿಯಾದ ಜೇನು ಸಿಕ್ತಿತ್ತು. ಯಾವುದಕ್ಕೂ ಅದೃಷ್ಟವಿರಬೇಕು'. ಎಂದುಕೊಳ್ಳುತ್ತಾ ಹಿಂದೆ ಮುಂದೆ ಯೋಚಿಸದೆ ಆತುರದಿಂದ ಜೇನು ಗೂಡಿಗೆ ಕೈ ಹಾಕಿತು.

ಗೂಡಿನಲ್ಲಿದ್ದ ಜೇನು ಹುಳುಗಳಿಗೆ ಕರಡಿ ತಮ್ಮ ಗೂಡಿಗೆ ಕೈ ಹಾಕುತ್ತಿದ್ದಂತೆ ವಿಪರೀತ ಸಿಟ್ಟು ಬಂದು, ಎಲ್ಲಾ ಹುಳುಗಳೂ ಒಮ್ಮೆಲೇ ಕಿಟ್ಟುವಿನ ಮೇಲೆರಗಿ ಸಿಕ್ಕ ಸಿಕ್ಕಲ್ಲಿ ಕಚ್ಚತೊಡಗಿದವು. ಜೇನು ನೊಣಗಳ ಹಠಾತ್ ದಾಳಿಯಿಂದ ಕಿಟ್ಟು ದಿಗ್ಭ್ರಮೆಗೊಂಡಿತು. ಜೇನು ನೊಣಗಳು ಒಂದೇ ಸಮನೆ ಕಚ್ಚತೊಡಗಿದಂತೆ ಕಿಟ್ಟುವಿನ ನೋವು ಎಲ್ಲೆ ಮೀರತೊಡಗಿತು. ನೋವು, ಉರಿ ತಡೆಯಲಾರದೆ ಕಿರುಚಾಡುತ್ತಾ ಅಲ್ಲಿಂದ ಉಸಿರುಕಟ್ಟಿ ಓಡತೊಡಗಿತು. ಜೇನು ನೊಣಗಳು ಬಹಳ ದೂರದವರೆಗೆ ಅಟ್ಟಿಸಿಕೊಂಡು ಹೋಗಿ ಕಿಟ್ಟುವನ್ನು ಹಣ್ಣುಗಾಯಿ ನೀರುಗಾಯಿ ಮಾಡಿಬಿಟ್ಟವು.

ತಡೆಯಲಾರದ ನೋವಿನಿಂದ ಒದ್ದಾಡುತ್ತಾ ಕಿಟ್ಟು ತಾನು ಹಲಸಿನ ಹಣ್ಣನ್ನು ಇಟ್ಟಿದ್ದ ಮರದ ಬಳಿ ಬಂತು. ಅಲ್ಲಿ ನೋಡಿದರೆ ಹಲಸಿನ ಹಣ್ಣು ಕಾಣೆಯಾಗಿತ್ತು. ಜೇನು ನೊಣಗಳ ಕಚ್ಚುವಿಕೆಯ ಯಾತನೆಯೊಂದಿಗೆ ಹಲಸಿನ ಹಣ್ಣು ಕಾಣೆಯಾದ ಬೇಸರವೂ ಸೇರಿಕೊಂಡಿತು. ಕತ್ತೆತ್ತಿ ಮರದ ಮೇಲೆ ನೋಡಿದರೆ ಕೋತಿಗಳ ಹಿಂಡೊಂದು ಹಲಸಿನ ಹಣ್ಣನ್ನು ಸಿಗಿದು ತೊಳೆಗಳನ್ನೆಲ್ಲಾ ಕಿತ್ತು ತಿನ್ನುತ್ತಿದ್ದವು. ಕಿಟ್ಟು ಅಸಹಾಯಕತೆಯಿಂದ ಅದನ್ನು ನೋಡುವುದು ಬಿಟ್ಟು ಬೇರೇನೂ ಮಾಡಲಾಗಲಿಲ್ಲ.

ಅತಿಯಾದ ನೋವಿನಿಂದ, ಹಲಸಿನ ಹಣ್ಣನ್ನು ಕಳೆದುಕೊಂಡ ಬೇಸರದಿಂದ ಕಿಟ್ಟು ಮನೆ ಕಡೆ ಹಜ್ಜೆ ಹಾಕಿತು. ಪಕ್ಕದ ಮನೆಯಲ್ಲೇ ಇದ್ದ ಪುಟ್ಟುವಿಗೆ ತನ್ನ ವ್ಯಥೆಯನ್ನೆಲ್ಲಾ ಹೇಳಿಕೊಂಡಿತು. 'ಪುಟ್ಟು, ನಿನ್ನ ಮಾತು ಕೇಳಬೇಕಿತ್ತು. ಜೇನಿಗೆ ಆಸೆ ಪಟ್ಟೆ. ಕೊನೆಗೆ ಜೇನೂ ಇಲ್ಲ, ಹಲಸೂ ಇಲ್ಲ. ಇದರ ಮೇಲೆ, ಜೇನು ನೊಣಗಳಿಂದ ಕಚ್ಚಿಸಿಕೊಂಡ ಯಾತನೆ ಬೇರೆ' ಎಂದು ಗೋಳಾಡಿತು.

ಆಗ ಪುಟ್ಟು 'ಕಿಟ್ಟಣ್ಣ, ದುರಾಸೆ ಒಳ್ಳೆಯದಲ್ಲ ಎಂದು ಈಗಲಾದರೂ ನಿನಗೆ ಗೊತ್ತಾಯಿತಲ್ಲ. ಹೋಗಲಿ ಬಿಡು. ಬೇಸರ ಪಟ್ಟುಕೊಳ್ಳಬೇಡ. ನಾನು ಹೊಟ್ಟೆ ತುಂಬ ತಿಂದ ಮೇಲೂ ಇನ್ನೂ ಸಾಕಷ್ಟು ತೊಳೆಗಳು ಉಳಿದಿವೆ. ಅದನ್ನೆಲ್ಲಾ ನಿನಗೇ ಕೊಡುತ್ತೇನೆ. ಹತ್ತಿರದಲ್ಲೇ ನನ್ನ ವೈದ್ಯ ಮಿತ್ರನಿದ್ದಾನೆ. ಅವನಿಂದ ಈಗಲೇ ನಿನಗೆ ಚಿಕಿತ್ಸೆ ಕೊಡಿಸಿ ನಿನ್ನ ನೋವನ್ನು ಕಡಿಮೆ ಮಾಡಿಸುತ್ತೇನೆ. ವೈದ್ಯನ ಬಳಿ ಹೋಗಿ ಬಂದ ಮೇಲೆ ನೀನು ಹಲಸಿನ ಹಣ್ಣು ತಿನ್ನುವೆಯಂತೆ' ಎಂದು ಹೇಳಿ ಕಿಟ್ಟುವನ್ನು ವೈದ್ಯರ ಬಳಿ ಕರೆದುಕೊಂಡು ಹೋಯಿತು. ■